**ಓ.ಎಸ್. ನಂಃ 226/2024**

**ಪಿ.ಡಬ್ಲ್ಯೂಃ 1**

**ದಿನಾಂಕ 17-09-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆ ವಾದಿಯ ಪರ: ಶ್ರೀ.ಕೆ.ಬಿ.ಜೆ. ವಕೀಲರಿಂದಃ</u>**

ಈ ದಾವೆಯ ವಾದಿ ನನ್ನ ಚಿಕ್ಕಪ್ಪನಾಗಿದ್ದು, ಅವರ ಪರ ಸಾಕ್ಷಿ ನುಡಿಯಲು ನನಗೆ ವಿಶೇಷ ಅಧಿಕಾರ ಪತ್ರವನ್ನು ಕೊಟ್ಟಿರುತ್ತಾರೆ. ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ರೂಪದಲ್ಲಿ ಸಲ್ಲಿಸುತ್ತಿದ್ದು ಅದನ್ನು ನನ್ನ ಮಾಹಿತಿ ಮೇರೆಗೆ ನನ್ನ ವಕೀಲರು ತಯಾರಿಸಿರುತ್ತಾರೆ. ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ವಿಶೇಷ ಅಧಿಕಾರ ಪತ್ರವನ್ನು ನಿಪಿ.1 ಎಂದು, ದಿನಾಂಕ 08.12.2022 ರ ನೊಂದಾಯಿತ ವಿಭಾಗ ಪತ್ರದ ಅಸಲು ಪ್ರತಿಯನ್ನು ನಿಪಿ.2 ಎಂದು, ಪಹಣಿಯನ್ನು ನಿಪಿ.3 ಮತ್ತು 4 ಎಂದು, ತೆರಿಗೆ ಪಾವತಿ ರಸೀದಿಯನ್ನು ನಿಪಿ.5 ಎಂದು, ಪಟ್ಟಾ ಪುಸ್ತಕವನ್ನು ನಿಪಿ.6 ಎಂದು, ದಿನಾಂಕ 03.04.2025 ರ ನೊಂದಾಯಿತ ದಾನ ಪತ್ರದ ದೃಢಿಕೃತ ನಕಲನ್ನು ನಿಪಿ.7 ಎಂದು, ಅದಕ್ಕೆ ಲಗತ್ತಾದ ಪ್ರಮಾಣ ಪತ್ರವನ್ನು ನಿಪಿ.7(ಎ) ಎಂದು, ಪೋಲಿಸರು ನೀಡಿದ ಸ್ವೀಕೃತಿಯನ್ನು ನಿಪಿ.8 ಎಂದು, ಹದ್ದು ಬಸ್ತು ನಕಾಶೆಯನ್ನು ನಿಪಿ.9 ಎಂದು ಗುರುತಿಸಲಾಯಿತು.

**ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**
**ಕೆ.ಆರ್.ನಗರ**